103	ಗೊರವನಹಳ್ಳಿ	104	ಕುರವಿನಕೊಪ್ಪ
105	ರಾಮನಗರ	106	ಕಟಮಳ್ಳಿ
107	ಎಕ್ಕೇರಿ	108	ಗೊರಬಾಳ
109	ಬಸಿಡೊಣಿ	110	ಶಿರಸಂಗಿ
111	ಕಲ್ಲಾಪುರ	112	ಗೋವನಕೊಪ್ಪ (ಇನಾಮ)
113	ಹರಳಕಟ್ಟಿ	114	ಮನಿಕಟ್ಟಿ
115	ಹೂಲಿಕಟ್ಟಿ	116	ಹೂಲಿ
117	ಚಿಕ್ಕುಂಬಿ	118	ಚುಳಕಿ
119	ಕಾಗದಾಳ	120	ಆಚಮಟ್ಟಿ

391 (497) ಶ್ರೀ ಮಾಮನಿ ವಿಶ್ವನಾಥ ಕರಬಸಪ್ಪ (ಪರಸಗಡ) : ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಳಗಾವಿ ಜಿಲ್ಲೆ ಸವದತ್ತಿ ಪಟ್ಟಣದಲ್ಲಿ 220 ಕೆ ವಿ ವಿದ್ಯುತ್ ವಿತರಣಾ ಕೇಂದ್ರವನ್ನು ಮಂಜೂರಾಗಿದ್ದರೂ ಇಲ್ಲಿವರೆಗೆ ಕೆಲಸ ಪ್ರಾರಂಭವಾಗದೇ ಇರಲು ಕಾರಣವೇನು,

ಆ) ಈ ವಿತರಣಾ ಕೇಂದ್ರವನ್ನು ಸ್ಥಾಪಿಸಲು ಜಮೀನು ಮಂಜೂರಾಗಿದೆಯೇ,

ಇ) ಹಾಗಿದ್ದಲ್ಲಿ ಜಮೀನು ಮಂಜೂರು ಮಾಡಲು ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಹೆಚ್ ಡಿ ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು)

ಅ) ಬೆಳಗಾವಿ ಜಿಲ್ಲೆ ಸವದತ್ತಿ ಪಟ್ಟಣಕ್ಕೆ ಮಂಜೂರಾಗಿರುವ 220 ಕೆ ವಿ ವಿದ್ಯುತ್ ವಿತರಣಾ ಕೇಂದ್ರದ ಕಾಮಗಾರಿಯನ್ನು ಕೈಗೊಳ್ಳಲು ಕೃಷಿ ಇಲಾಖೆಯ ಜಮೀನನ್ನು ಕರ್ನಾಟಕ ವಿದ್ಯುತ್ ಪ್ರಸರಣ ನಿಗಮವು ಗುರುತಿಸಿದ್ದು, ಕೃಷಿ ಇಲಾಖೆಯು ಭೂಮಿಯನ್ನು ಕನಾಟಕ ವಿದ್ಯುತ್ ಪ್ರಸರಣ ನಿಗಮದ ವಶಕ್ಕೆ ನೀಡಬೇಕಾಗಿರುತ್ತದೆ ಈ ಕಾರಣದಿಂದಾಗಿ, ಕಾಮಗಾರಿಯನ್ನು ಪ್ರಾರಂಭಿಸಿರುವುದಿಲ್ಲ

ಆ) ಕೃಷಿ ಇಲಾಖೆಯ ಬೀಜೋತ್ಪಾದನಾ ಕೇಂದ್ರದ ಕೃಷಿ ಕ್ಷೇತ್ರದ ಜಮೀನನ್ನು ಸದರಿ 220 ಕೆ ವಿ ವಿದ್ಯುತ್ ಉಪ ಕೇಂದ್ರವನ್ನು ಸ್ಥಾಪಿಸಲು ಗುರುತಿಸಲಾಗಿದ್ದು, ಕೃಷಿ ಇಲಾಖೆಯು ನಿರ್ಧರಿಸಿದ ಬೆಲೆಗೆ ಜಮೀನನ್ನು ಖರೀದಿಸಲು ಕರ್ನಾಟಕ ವಿದ್ಯುತ್ ಪ್ರಸರಣ ನಿಗಮವು ಸಮ್ಮತಿಸಿರುತ್ತದೆ ಕೃಷಿ ಇಲಾಖೆಯಿಂದ ಮಂಜೂರಾತಿಯನ್ನು ನಿರೀಕ್ಷಿಸಲಾಗಿದೆ

ಇ) ಕನಾಟಕ ವಿದ್ಯುತ್ ಪ್ರಸರಣ ನಿಗಮವು ಮೇಲ್ಕಂಡ ಜಮೀನನ್ನು ನೀಡುವಂತೆ ಕೃಷಿ ಇಲಾಖೆಯನ್ನು ಕೋರಿದೆ ಹಾಗೂ ಕೃಷಿ ಇಲಾಖೆಯು ನಿರ್ಧರಿಸುವ ಬೆಲೆಯನ್ನು ನೀಡಲು ಸಮ್ಮತಿಸಿರುತ್ತದೆ ಕೃಷಿ ಇಲಾಖೆಯ ಆಯುಕ್ತರು, ಸದರೀ ಜಮೀನನ್ನು ಕರ್ನಾಟಕ ವಿದ್ಯುತ್ ಪ್ರಸರಣ ನಿಗಮಕ್ಕೆ ಮಂಜೂರು ಮಾಡುವಂತೆ ಕೋರಿ ಕೃಷಿ ಮತ್ತು ತೋಟಗಾರಿಕೆ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳಿಗೆ ಸಲ್ಲಿಸಿರುವ ಪ್ರಸ್ತಾವನೆಯು ಕೃಷಿ ಇಲಾಖೆಯ ಪರಿಶೀಲನೆಯಲ್ಲಿದ್ದು, ಮಂಜೂರಾತಿಯನ್ನು ನಿರೀಕ್ಷಿಸಲಾಗಿದೆ

392 (498) ಶ್ರೀ ಮಾಮನಿ ವಿಶ್ವನಾಥ ಕರಬಸಪ್ಪ (ಪರಸಗಡ) . ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಳಗಾಂವ ಜಿಲ್ಲೆ ಸವದತ್ತಿ ತಾಲ್ಲೂಕಿನ ಜಿಲ್ಲಾ ಮುಖ್ಯ ರಸ್ತೆಗಳನ್ನು ಮೇಲ್ದರ್ಜೆಗೇರಿಸಿ ರಾಜ್ಯ ಹೆದ್ದಾರಿಗಳಾಗಿ ಪರಿವರ್ತಿಸಿದ ರಸ್ತೆಗಳ ನಿರ್ವಹಣೆ ಪ್ರತಿ ಕಿ ಮೀಗೆ 30 ಲಕ್ಷ ರೂ ಗಳು ಬಿಡುಗಡೆಯಾಗುತ್ತಿದ್ದರೂ ಆ ಹಣದಲ್ಲಿ ರಸ್ತೆಗಳ ಉತ್ತಮ ಗುಣಮಟ್ಟದ ಕೆಲಸ ನಿರ್ವಹಣೆ ಮಾಡಲು ಸಾಧ್ಯವಾಗುತ್ತಿಲ್ಲದಿರುವುದು ಸರಕಾರದ ಗಮನಕ್ಕೆ ಬಂದಿದೆಯೇ,

ಆ) ಹಾಗಿದ್ದಲ್ಲಿ, ಮೇಲ್ದರ್ಜೆಗೇರಿಸಿದ ಈ ಜಿಲ್ಲಾ ಮುಖ್ಯ ರಸ್ತೆಗಳ ಪ್ರತಿ ಕಿಮೀ ಗೆ ಹೆಚ್ಚಿನ ಅನುದಾನವನ್ನು ಬಿಡುಗಡೆ ಮಾಡಿ ರಸ್ತೆಗಳ ಪೂರ್ಣ ಪ್ರಮಾಣದ ಅಭಿವೃದ್ಧಿಗೆ ಸರಕಾರ ಕ್ರಮ ಕೈಗೊಳ್ಳುವುದೇ?

ಶ್ರೀ ಹೆಚ್ ಡಿ ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು)

ಅ) ಬೆಳಗಾವಿ ಜಿಲ್ಲೆ ಸವದತ್ತಿ ತಾಲ್ಲೂಕಿನ ರಾಜ್ಯ ಹೆದ್ದಾರಿಗಳ 2005–08 ರವರೆಗಿನ ಮೂರು ವರ್ಷಗಳ ನಿರ್ವಹಣೆಯು ಪ್ಯಾಕೆಜ್ ನಂ 2ಎ ಪ್ರ ಗ ಒಟ್ಟು 185 82 ಕಿ ಮೀಗಳಿದ್ದು ರೂ 611 82 ಲಕ್ಷಗಳಿಗೆ ಗುತ್ತಿಗೆ ನೀಡ ಗಿರುತ್ತದೆ ಅಂದರೆ ಪ್ರತಿ ಕಿಮೀ ಗೆ ಮೂರು ವರ್ಷಕ್ಕೆ ರೂ 3 29 ಲಕ್ಷಗಳ ಗುತ್ತದೆ ಒಂದು ವರ್ಷಕ್ಕೆ ರೂ 1 09 ಲಕ್ಷಗಳಾಗುತ್ತದೆ

ಪ್ರತಿ ಕಿ ಮೀಗೆ ರೂ 30 00 ಲಕ್ಷಗಳಂತೆ ಅನುದಾನ ಬಿಡು ಗಡೆಯಾಗಿರುವುದಿಲ್ಲ ಸದರಿ ಗುತ್ತಿಗೆಯ ಒಟ್ಟು ಮೊತ್ತದಲ್ಲಿ ರಸ್ತೆಗಳ ನಿರ್ವಹಣೆಯನ್ನು ಸಮರ್ಪಕವಾಗಿ ಮಾಡಿ ಸಾರ್ವಜನಿಕ ಸಂಚಾರಕ್ಕೆ ಸುಗಮಗೊಳಿಸಲಾಗುತ್ತಿದೆ

ಆ) ಸದರಿ ರಾಜ್ಯ ಹೆದ್ದಾರಿ ನಿರ್ವಹಣೆಯ ಗುತ್ತಿಗೆಯು 3 ವರ್ಷ ಅಂದರೆ 2005–08ರವರೆಗೆ ಇದ್ದು ಗುತ್ತಿಗೆ ಒಡಂಬಡಿಕೆ ದರದಲ್ಲಿಯೇ ಮಾಡಿ ಮುಗಿಸಬೇಕಾಗುತ್ತದೆ ಈ ವರ್ಷ ಮಳೆ ಹೆಚ್ಚಿಗೆ ಆಗಿದ್ದರಿಂದ ರಸ್ತೆಗೆ ಹಾನಿ